ಎಸ್ಸೆಸ್ಸೆಲ್ಸಿ ಪರೀಕ್ಷೆ ಬಳಿಕ ಆಂಶಿಕ ಲಾಕ್‌ಡೌನ್? | ಅಂತರ್ಜಿಲ್ಲಾ ಬಸ್ ಸಂಚಾರ ರದ್ದು ಚರ್ಚೆ

# ಜುಲೈ 7ರಿಂದ ಬಿಗಿ ನಿಯಮ ಜಾರಿ

30/6

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಕೊರೊನಾ ದಿನದಿಂದ ದಿನಕ್ಕೆ ಸ್ಫೋಟಿಸುತ್ತಿರುವ ಹಿನ್ನೆಲೆಯಲ್ಲಿ ಬಿಗಿ ಕ್ರಮದ ಸ್ಪಷ್ಟ ಸೂಚನೆಯನ್ನು ಸರಕಾರ ನೀಡಿದೆ. ಆದರೆ, ಪ್ರಸಕ್ತ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿರುವುದರಿಂದ ಸರಕಾರ ಸ್ವಲ್ಪ ನಿಧಾನ ಮಾಡುತ್ತಿದ್ದು, ಜುಲೈ 7ರಿಂದ ಭಾಗಶಃ ಲಾಕ್‌ಡೌನ್ ಸೇರಿದಂತೆ ಕೆಲವೊಂದು ಬಿಗಿ ಕ್ರಮದ ಸಾಧ್ಯತೆ ಇದೆ.

ಕೋವಿಡ್ ನಿಯಂತ್ರಣಕ್ಕಾಗಿ ಗೃಹ, ಆರೋಗ್ಯ ಸೇರಿದಂತೆ ನಾನಾ ಇಲಾಖೆಗಳ ಮುಖ್ಯಸ್ಥರ ಜತೆಗೆ ಚರ್ಚೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ್ ಸೋಮವಾರ ಈ ಮುನ್ಸೂಚನೆ ನೀಡಿದ್ದಾರೆ.

''ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಕ್ತಾಯವಾದ ಬಳಿಕ ಜುಲೈ 7ರಿಂದ ಇನ್ನಷ್ಟು ಬಿಗಿ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ,'' ಎಂದು ಹೇಳಿದ ಅವರು, ಅಂತರ್ ಜಿಲ್ಲಾ ಪ್ರಯಾಣ ರದ್ದು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಇನ್ನೊಂದು ಸುತ್ತಿನ ಸಭೆ ನಡೆಸುತ್ತೇವೆ. ಆ ಬಳಿಕ ಸಿಎಂ ಯಡಿಯೂರಪ್ಪ ನಿಲುವು ಪ್ರಕಟಿಸುತ್ತಾರೆ.'' ಎಂದರು.

## ದೇಶವನ್ನು ಉದ್ದೇಶಿಸಿ ಇಂದು ಪ್ರಧಾನಿ ಭಾಷಣ



ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ದೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ''ಪ್ರಧಾನಿಯವರು ಮಂಗಳವಾರ ಸಂಜೆ 4 ಗಂಟೆಗೆ ದೇಶವನ್ನು ಉದ್ದೇಶಿಸಿ ಮಾತನಾಡುವರು,'' ಎಂದು ಪ್ರಧಾನಿ ಕಾರ್ಯಾಲಯ ಸೋಮವಾರ ರಾತ್ರಿ ಟ್ವೀಟ್ ಮಾಡಿದೆ. ಕೊರೊನಾ ಲಾಕ್‌ಡೌನ್‌ನ ಅನ್‌ಲಾಕ್ 1.0 ಮಂಗಳವಾರ ಕೊನೆಯಾಗಲಿದ್ದು, ಮುಂದಿನ ನಡೆ ಕುರಿತು ಪ್ರಸ್ತಾಪ ಮಾಡುವ ನಿರೀಕ್ಷೆ ಇದೆ.

## ಪ್ರಮುಖ ತೀರ್ಮಾನ

- ಫಲಿತಾಂಶವನ್ನು ನೇರವಾಗಿ ರೋಗಿಗೆ ಹೇಳುವಂತಿಲ್ಲ
- ಸೂಕ್ತ ಸಿದ್ಧತೆಯ ಬಳಿಕವೇ ಮಾಹಿತಿ
- ಲಕ್ಷಣರಹಿತರಿಗೆ ಮನೆಯಲ್ಲೇ ಐಸೋಲೇಷನ್, ಇಲ್ಲವೇ ಕೇರ್ ಸೆಂಟರ್‌ಗಳಲ್ಲಿ ಚಿಕಿತ್ಸೆ
- ಹಿರಿಯರು, ಅನ್ಯರೋಗಗಳಿರುವವರು ಪ್ರಮುಖ ಆಸ್ಪತ್ರೆಗೆ

## ಗುಂಪುಗೂಡುವಿಕೆಗೆ ತಡೆ

ಸಾರ್ವಜನಿಕವಾಗಿ ಜನರು ಗುಂಪುಗೂಡುತ್ತಿರುವುದನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ. ಅದರಲ್ಲೂ ಪಾರ್ಕ್‌ನಲ್ಲಿ ಒಂದೆಡೆ ಕುಳಿತು ಹರಟೆ, ಒಬ್ಬರು ಕುಳಿತು ಹೋದ ಜಾಗದಲ್ಲಿ ಇನ್ನೊಬ್ಬರು ಕುಳಿತುಕೊಳ್ಳುವುದರಿಂದ ಸೋಂಕಿನ ಪ್ರಸರಣಕ್ಕೆ ಹಾದಿಯಾಗುತ್ತದೆ ಎಂಬ ಬಗ್ಗೆ ಆತಂಕ ವ್ಯಕ್ತವಾಗಿದೆ. ಸಚಿವ ಅಶೋಕ್ ಕೂಡಾ ಇದಕ್ಕೆ ಕಡಿವಾಣ ಹಾಕುವ ಮಾತನಾಡಿದ್ದಾರೆ.



## 6 ತಿಂಗಳ ಸೇವೆಗೆ ಸಿದ್ಧರಾಗಿ

ವೈದ್ಯರು, ನರ್ಸ್ ಸೇರಿದಂತೆ ಆರೋಗ್ಯ ಕ್ಷೇತ್ರದಲ್ಲಿ ದುಡಿಯುವ ಉದ್ಯೋಗಿಗಳು ಮುಂದಿನ 6 ತಿಂಗಳು ಕಾಲ ಇದೇ ರೀತಿ ಕೆಲಸ ಮಾಡುವುದಕ್ಕೆ ಮಾನಸಿಕವಾಗಿ ಸಿದ್ಧರಾಗಿರುವಂತೆ ಸಚಿವ ಅಶೋಕ್ ಮನವಿ ಮಾಡಿದ್ದಾರೆ. ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಸೋಂಕಿತರ ಸಂಖ್ಯೆ ಇನ್ನಷ್ಟು ಹೆಚ್ಚುವ ಸಾಧ್ಯತೆ ಇರುವುದರಿಂದ ಸರಕಾರ ಸಿದ್ಧತೆ ನಡೆಸಿದೆ.